# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**- ಪಿರಿಯ ಪಟ್ಟಣ ತಾಲ್ಲೂಕಿನ ಜಲಾನಯನ ಅಭಿವೃದ್ದಿ ಇಲಾಖೆಯಲ್ಲಿ 2000-01ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಕಾಮಗಾರಿಗಳಲ್ಲಿ ಅವ್ಯವಹಾರ-ಶಿಸ್ತು ಕ್ರಮ.

**ಓದಲಾಗಿದೆ:-**

1) ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂ. ಕೃತೋಇ 38 ಕೃಪವಿ 2005, ದಿನಾಂಕ: 25-07-2006.
2) ಶ್ರೀ ಡಿ.ಎನ್. ಹುಚ್ಚೇಗೌಡ ,ಕೃಷಿ ಅಧಿಕಾರಿ ಇವರ ಲಿಖಿತ ಹೇಳಿಕೆ ದಿನಾಂಕ: 13-09-2006.
3) ಶ್ರೀ ಎಂ.ಎನ್. ಮಲ್ಲೇಗೌಡ, ಕೃಷಿ ಸಹಾಯಕ ಇವರ ಲಿಖಿತ ಹೇಳಿಕೆ ದಿನಾಂಕ: 13-09-2006.
4) ಶ್ರೀ ಹೆಚ್.ಎನ್. ಚಂದ್ರಶೇಖರಯ್ಯ, ಕೃಷಿ ಸಹಾಯಕ ಇವರ ಹೇಳಿಕೆ ದಿನಾಂಕ: 13-09-2006.
5) ಸರ್ಕಾರದ ಆದೇಶ ಸಂ. ಕೃತೋಇ 38 ಕೃಪವಿ 2005, ದಿನಾಂಕ: 11-07-2007.
6) ಸರ್ಕಾರದ ಆದೇಶ ಸಂ. ಕೃತೋಇ 38 ಕೃಪವಿ 2005, ದಿನಾಂಕ: 03-10-2007.
7) ಸರ್ಕಾರದ ಆದೇಶ ಸಂ. ಕೃತೋಇ 38 ಕೃಪವಿ 2005, ದಿನಾಂಕ:23-08-2008.
8) ಶ್ರೀ ಸುಬ್ಬರಾವ್, ವಿಚಾರಣಾಧಿಕಾರಿಗಳು ಹಾಗೂ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರು ನೀಡಿದ ವಿಚಾರಣಾ ವರದಿ ದಿನಾಂಕ: 01-03-2011.
9) ಸರ್ಕಾರದ ಎರಡನೇ ಕಾರಣ ಕೇಳುವ ಸೂಚನಾ ಪತ್ರ ಸಂ. ಕೃತೋಇ 38 ಕೃಪವಿ 2005, ದಿನಾಂಕ: 05-05-2011.
10) ಶ್ರೀ ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ (ನಿವೃತ್ತ) ಇವರ ಲಿಖಿತ ಹೇಳಿಕೆ ದಿನಾಂಕ: 14-07-2011.

*****

**ಪ್ರಸ್ತಾವನೆ:-**

ಪಿರಿಯಾ ಪಟ್ಟಣ ತಾಲ್ಲೂಕಿನ ಜಲಾನಯನ ಅಭಿವೃದ್ದಿ ಇಲಾಖೆಯಲ್ಲಿ 2000-01ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಈ ಕೆಳಕಂಡ ಅಧಿಕಾರಿಗಳು ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಡಿ ಕಾಮಗಾರಿಗಳನ್ನು ನಿರ್ವಹಣೆಗಾಗಿ ರೂ. 9,91,900/-ಗಳನ್ನು ಪಡೆದುಕೊಂಡು ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕೆ ಲೆಕ್ಕ ಪತ್ರಗಳನ್ನು ಸಲ್ಲಿಸದೇ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಅವರುಗಳ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಶಿಸ್ತು ಕ್ರಮ ಜರುಗಿಸುವ ಕುರಿತು, ಕಾರಣ ಕೇಳುವ ಪತ್ರ ಜಾರಿ ಮಾಡಿ, ಅವರ ಮೇಲಿರುವ ಆರೋಪಗಳ ಬಗ್ಗೆ ಲಿಖಿತ ಹೇಳಿಕೆಯನ್ನು ನೀಡುವಂತೆ ಮೇಲೆ ಓದಲಾದ ಕ್ರ.ಸಂ.(1)ರ ಪತ್ರದಲ್ಲಿ ಸೂಚಿಸಲಾಯಿತು.

--2--

23

(1) ಶ್ರೀ ಡಿ.ಎನ್.ಹುಚ್ಚೇಗೌಡ, ಅಂದಿನ ಕೃಷಿ ಅಧಿಕಾರಿ,
ಹಾಲಿ ನಿವೃತ್ತ, ಜಲಾನಯನ ಅಭಿವೃದ್ಧಿ ಇಲಾಖೆ,
ಪಿರಿಯಾ ಪಟ್ಟಣ.

(2) ಶ್ರೀ ಹೆಚ್.ಎನ್. ಚಂದ್ರಶೇಖರಯ್ಯ, ಅಂದಿನ
ಕೃಷಿ ಸಹಾಯಕ, ಪಿರಿಯಾ ಪಟ್ಟಣ.

(3) ಶ್ರೀ ಎಂ.ಎನ್. ಮಲ್ಲೇಗೌಡ, ಅಂದಿನ ಕೃಷಿ
ಸಹಾಯಕ ಹಾಲಿ ನಿವೃತ್ತ.

ಮೇಲೆ ಕ್ರ.ಸಂ. (2) ರಿಂದ (4)ರಲ್ಲಿ ಓದಲಾದ ಪತ್ರಗಳಲ್ಲಿ ಮೇಲ್ಕಂಡವರು ತಮ್ಮ ಮೇಲಿರುವ ಆರೋಪಗಳನ್ನು ಒಪ್ಪುವುದಿಲ್ಲವೆಂದು ಲಿಖಿತ ಹೇಳಿಕೆ ನೀಡಿದರು. ಸದರಿಯವರು ನೀಡಿದ ಲಿಖಿತ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಅವರ ಹೇಳಿಕೆಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಕಂಡು ಬರದಿರುವುದರಿಂದ, ಸತ್ಯಾ-ಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಪ್ರಕರಣದಲ್ಲಿ ಕರ್ನಾಟಕ ನಾಗರೀಕರ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಶಿಸ್ತು ಕ್ರಮ ಜರುಗಿಸುವ ಸಲುವಾಗಿ, ಮೇಲೆ ಓದಲಾದ ಕ್ರ.ಸಂ.(5)ರಲ್ಲಿ ಶ್ರೀ ಟಿ.ಎನ್. ಪಾಲನೇತ್ರ , ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ, ಸದರಿಯವರ ವಿರುದ್ಧ ಜಂಟಿ ಇಲಾಖೆ ವಿಚಾರಣೆ ನಡೆಸಿ ವರದಿ ನೀಡುವಂತೆ ಕೋರಲಾಯಿತು. ಆದರೆ ಸದರಿ ವಿಚಾರಣಾಧಿಕಾರಿಗಳು, ತಮ್ಮ ಕಣ್ಣಿನ ಶಸ್ತ್ರ ಚಿಕಿತ್ಸೆ ಸಂಬಂಧ ಈ ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ ಪ್ರಯುಕ್ತ, ಇವರ ಬದಲಾಗಿ ಶ್ರೀ ಪಿ.ಸಿ. ದಯಾಪರಮೂರ್ತಿ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ಮೇಲೆ ಓದಲಾದ (6)ರ ಸರ್ಕಾರದ ಆದೇಶದಲ್ಲಿ ನೇಮಿಸಲಾಯಿತು.

ನಂತರ ಈ ಪ್ರಕರಣದಲ್ಲಿಯ ವಿಚಾರಣಾಧಿಕಾರಿಯವರಾದ ಶ್ರೀ ಪಿ.ಸಿ. ದಯಾಪರಮೂರ್ತಿ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಮರಣ ಹೊಂದಿರುವುದಾಗಿ ಜಲಾನಯನ ಅಭಿವೃದ್ಧಿ ಆಯುಕ್ತರು ತಿಳಿಸಿದ್ದರಿಂದ ಸದರಿ ವಿಚಾರಣಾಧಿಕಾರಿಯವರ ಬದಲಾಗಿ, ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರನ್ನು ಮೇಲೆ ಓದಲಾದ ಕ್ರ.ಸಂ. (7)ರಲ್ಲಿ ನೇಮಿಸಿ ಆದೇಶ ಹೊರಡಿಸಲಾಯತು.

ಮೇಲೆ ಕ್ರ.ಸಂ.(8) ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು ಇವರು ಸದರಿ ಪ್ರಕರಣದಲ್ಲಿ ಮೂರು ಜನ ಆರೋಪಿತ ಅಧಿಕಾರಿಗಳಲ್ಲಿ ಮೊದಲನೇ ಆರೋಪಿತ ಅಧಿಕಾರಿಯವರಾದ ಶ್ರೀ ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ (ನಿವೃತ್ತ) ಇವರ ಮೇಲಿರುವ ಆರೋಪ 1 ರಿಂದ 6 ಮತ್ತು 8ನೇ ಆರೋಪಗಳು ರುಜುವಾತಾಗಿಲ್ಲವೆಂದು, 7ನೇ ಆರೋಪ ಮಾತ್ರ ರುಜುವಾತಾಗಿದೆಯೆಂದು, ಉಳಿದ ಆರೋಪಿತ ಅಧಿಕಾರಿಯವರಾದ ಶ್ರೀ ಹೆಚ್. ಎನ್. ಚಂದ್ರಶೇಖರಯ್ಯ, ಹಾಗೂ ಶ್ರೀ ಎಂ. ಎನ್. ಮಲ್ಲೇಗೌಡ, ಅಂದಿನ ಕೃಷಿ ಸಹಾಯಕರ ಮೇಲಿರುವ ಆರೋಪಗಳು ರುಜುವಾತಾಗಿಲ್ಲವೆಂದು ವಿಚಾರಣಾ ವರದಿ ಸಲ್ಲಿಸಿದರು.

ಮೇಲೆ ಓದಲಾದ ಕ್ರ.ಸಂ.(9)ರಲ್ಲಿ ಆರೋಪ ಸಾಬೀತಾಗಿರುವ ಅಧಿಕಾರಿಯವರಾದ ಶ್ರೀ. ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ(ನಿವೃತ್ತ) ಇವರಿಗೆ ವಿಚಾರಣಾಧಿಕಾರಿಯವರು ನೀಡಿದ ವಿಚಾರಣಾ ವರದಿಯನ್ನು ಲಗತ್ತಿಸಿ, ಈ ಬಗ್ಗೆ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಿ, 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಯಿತು.

ಮೇಲೆ ಓದಲಾದ ಕ್ರ.ಸಂ.(10)ರಲ್ಲಿ ಶ್ರೀ. ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ(ನಿವೃತ್ತ) ಇವರು ತಮ್ಮ ಲಿಖಿತ ಹೇಳಿಕೆ ನೀಡಿ, ತಮ್ಮ ಮೇಲಿರುವ 7ನೇ ಆರೋಪವಾದ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಡಿ ರೈತರ ಪ್ರವಾಸಕ್ಕಾಗಿ ರೂ. 44,000/- ಹಾಗೂ ಗೃಹೋತ್ಪಾದನೆ ಚಟುವಟಿಕೆಗಾಗಿ ರೂ. 6,13,300 ಒಟ್ಟು ರೂ. 6,57,300ಗಳನ್ನು ಪಡೆದುಕೊಂಡು ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚು ಮಾಡದೇ ದುರುಪಯೋಗಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ, ತಾವು ಈ ಹಣವನ್ನು ಉದ್ದೇಶಿತ ಕಾರ್ಯಕ್ರಮಗಳಿಗಾಗಿಯೇ ಬಳಸಲಾಗಿದ್ದು, ಹಾಗೂ ಮಾರ್ಚ್ ಮಾಹೆಯಲ್ಲಿ ವಿವಿಧ ಯೋಜನೆಗಳ ಕಾಮಗಾರಿಗಳಲ್ಲಿ ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ತೊಡಗಿದ್ದರಿಂದ ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿರುತ್ತದೆ, ಅದಲ್ಲದೇ ಮಾತೃ ಇಲಾಖೆಗೆ ವರ್ಗವಾದನಂತರ ವೋಚರುಗಳನ್ನು ಸಲ್ಲಿಸಲು ತಡವಾಗಿರುತ್ತದೆ. ವೋಚರ್ ಸಲ್ಲಿಸಲು ಮತ್ತು ತಮ್ಮ ಮೇಲಿರುವ ಅಪಾದನೆಯನ್ನು ನ್ಯಾಯಯುತವಾಗಿ ಅಂತಿಮಗೊಳಿಸಿ, ವಿಚರಣಾಧಿಕಾರಿಗಳು ವಿಚಾರಣಾ ವರದಿಯನ್ವಯ ಯಾವುದೇ ತಪಾಸಣೆಯು ವ್ಯವಸ್ಥಿತವಾಗಿ ನಡೆದಿರುವುದಿಲ್ಲವೆಂದು ಆಗಿರುವ ಕೆಲಸ ಕಾರ್ಯಕ್ರಮಗಳ ಬಗ್ಗೆ ನಮೂದಿಸದೇ ಏಕ ಪಕ್ಷೀಯವಾಗಿ ಹಣ ದುರುಪಯೋಗವಾಗಿರುವ ಬಗ್ಗೆ ತಿಳಿಸಿರುವುದರಲ್ಲಿ ಸತ್ಯಾಂಶವಿಲ್ಲವೆಂದು ತಿಳಿಸಿ, ತಮ್ಮ ಮೇಲಿರುವ ಆರೋಪಗಳಿಂದ ಮುಕ್ತರನ್ನಾಗಿ ಮಾಡಬೇಕೆಂದು ಕೋರಿರುವರು.

(1) ಶ್ರೀ ಡಿ.ಎನ್.ಹುಚ್ಚೇಗೌಡ, ಅಂದಿನ ಕೃಷಿ ಅಧಿಕಾರಿ,
ಹಾಲಿ ನಿವೃತ್ತ, ಜಲಾನಯನ ಅಭಿವೃದ್ಧಿ ಇಲಾಖೆ,
ಪಿರಿಯಾ ಪಟ್ಟಣ.

(2) ಶ್ರೀ ಹೆಚ್.ಎನ್. ಚಂದ್ರಶೇಖರಯ್ಯ, ಅಂದಿನ
ಕೃಷಿ ಸಹಾಯಕ, ಪಿರಿಯಾ ಪಟ್ಟಣ.

(3) ಶ್ರೀ ಎಂ.ಎನ್. ಮಲ್ಲೇಗೌಡ, ಅಂದಿನ ಕೃಷಿ
ಸಹಾಯಕ ಹಾಲಿ ನಿವೃತ್ತ.

ಮೇಲೆ ಕ್ರ.ಸಂ. (2) ರಿಂದ (4)ರಲ್ಲಿ ಓದಲಾದ ಪತ್ರಗಳಲ್ಲಿ ಮೇಲ್ಕಂಡವರು ತಮ್ಮ ಮೇಲಿರುವ ಆರೋಪಗಳನ್ನು ಒಪ್ಪುವುದಿಲ್ಲವೆಂದು ಲಿಖಿತ ಹೇಳಿಕೆ ನೀಡಿದರು. ಸದರಿಯವರು ನೀಡಿದ ಲಿಖಿತ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಅವರ ಹೇಳಿಕೆಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಕಂಡು ಬರದಿರುವುದರಿಂದ, ಸತ್ಯಾ-ಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಪ್ರಕರಣದಲ್ಲಿ ಕರ್ನಾಟಕ ನಾಗರೀಕರ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಶಿಸ್ತು ಕ್ರಮ ಜರುಗಿಸುವ ಸಲುವಾಗಿ, ಮೇಲೆ ಓದಲಾದ ಕ್ರ.ಸಂ.(5)ರಲ್ಲಿ ಶ್ರೀ ಟಿ.ಎನ್. ಪಾಲನೇತ್ರ , ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ, ಸದರಿಯವರ ವಿರುದ್ದ ಜಂಟಿ ಇಲಾಖೆ ವಿಚಾರಣೆ ನಡೆಸಿ ವರದಿ ನೀಡುವಂತೆ ಕೋರಲಾಯಿತು. ಆದರೆ ಸದರಿ ವಿಚಾರಣಾಧಿಕಾರಿಗಳು, ತಮ್ಮ ಕಣ್ಣಿನ ಶಸ್ತ್ರ ಚಿಕಿತ್ಸೆ ಸಂಬಂಧ ಈ ವಿಚಾರಣೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ ಪ್ರಯುಕ್ತ, ಇವರ ಬದಲಾಗಿ ಶ್ರೀ ಪಿ.ಸಿ. ದಯಾಪರಮೂರ್ತಿ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ಮೇಲೆ ಓದಲಾದ (6)ರ ಸರ್ಕಾರದ ಆದೇಶದಲ್ಲಿ ನೇಮಿಸಲಾಯಿತು.

ನಂತರ ಈ ಪ್ರಕರಣದಲ್ಲಿಯ ವಿಚಾರಣಾಧಿಕಾರಿಯವರಾದ ಶ್ರೀ ಪಿ.ಸಿ. ದಯಾಪರಮೂರ್ತಿ, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಮರಣ ಹೊಂದಿರುವುದಾಗಿ ಜಲಾನಯನ ಅಭಿವೃದ್ಧಿ ಆಯುಕ್ತರು ತಿಳಿಸಿದ್ದರಿಂದ ಸದರಿ ವಿಚಾರಣಾಧಿಕಾರಿಯವರ ಬದಲಾಗಿ, ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರನ್ನು ಮೇಲೆ ಓದಲಾದ ಕ್ರ.ಸಂ. (7)ರಲ್ಲಿ ನೇಮಿಸಿ ಆದೇಶ ಹೊರಡಿಸಲಾಯತು.

ಮೇಲೆ ಕ್ರ.ಸಂ.(8) ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು ಇವರು ಸದರಿ ಪ್ರಕರಣದಲ್ಲಿ ಮೂರು ಜನ ಆರೋಪಿತ ಅಧಿಕಾರಿಗಳಲ್ಲಿ ಮೊದಲನೇ ಆರೋಪಿತ ಅಧಿಕಾರಿಯವರಾದ ಶ್ರೀ ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ (ನಿವೃತ್ತ) ಇವರ ಮೇಲಿರುವ ಆರೋಪ 1 ರಿಂದ 6 ಮತ್ತು 8ನೇ ಆರೋಪಗಳು ರುಜುವಾತಾಗಿಲ್ಲವೆಂದು, 7ನೇ ಆರೋಪ ಮಾತ್ರ ರುಜುವಾತಾಗಿದೆಯೆಂದು, ಉಳಿದ ಆರೋಪಿತ ಅಧಿಕಾರಿಯವರಾದ ಶ್ರೀ ಹೆಚ್. ಎನ್. ಚಂದ್ರಶೇಖರಯ್ಯ, ಹಾಗೂ ಶ್ರೀ ಎಂ. ಎನ್. ಮಲ್ಲೇಗೌಡ, ಅಂದಿನ ಕೃಷಿ ಸಹಾಯಕರ ಮೇಲಿರುವ ಆರೋಪಗಳು ರುಜುವಾತಾಗಿಲ್ಲವೆಂದು ವಿಚಾರಣಾ ವರದಿ ಸಲ್ಲಿಸಿದರು.

ಮೇಲೆ ಓದಲಾದ ಕ್ರ.ಸಂ.(9)ರಲ್ಲಿ ಆರೋಪ ಸಾಬೀತಾಗಿರುವ ಅಧಿಕಾರಿಯವರಾದ ಶ್ರೀ. ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ(ನಿವೃತ್ತ) ಇವರಿಗೆ ವಿಚಾರಣಾಧಿಕಾರಿಯವರು ನೀಡಿದ ವಿಚಾರಣಾ ವರದಿಯನ್ನು ಲಗತ್ತಿಸಿ, ಈ ಬಗ್ಗೆ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಿ, 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಜಾರಿ ಮಾಡಲಾಯಿತು.

ಮೇಲೆ ಓದಲಾದ ಕ್ರ.ಸಂ.(10)ರಲ್ಲಿ ಶ್ರೀ. ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ(ನಿವೃತ್ತ) ಇವರು ತಮ್ಮ ಲಿಖಿತ ಹೇಳಿಕೆ ನೀಡಿ, ತಮ್ಮ ಮೇಲಿರುವ 7ನೇ ಆರೋಪವಾದ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಡಿ ರೈತರ ಪ್ರವಾಸಕ್ಕಾಗಿ ರೂ. 44,000/- ಹಾಗೂ ಗೃಹೋತ್ಪಾದನೆ ಚಟುವಟಿಕೆಗಾಗಿ ರೂ. 6,13,300 ಒಟ್ಟು ರೂ. 6,57,300ಗಳನ್ನು ಪಡೆದುಕೊಂಡು ಉದ್ದೇಶಿತ ಕಾರ್ಯಕ್ರಮಕ್ಕೆ ಖರ್ಚು ಮಾಡದೇ ದುರುಪಯೋಗಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ, ತಾವು ಈ ಹಣವನ್ನು ಉದ್ದೇಶಿತ ಕಾರ್ಯಕ್ರಮಗಳಿಗಾಗಿಯೇ ಬಳಸಲಾಗಿದ್ದು, ಹಾಗೂ ಮಾರ್ಚ್ ಮಾಹೆಯಲ್ಲಿ ವಿವಿಧ ಯೋಜನೆಗಳ ಕಾಮಗಾರಿಗಳಲ್ಲಿ ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ತೊಡಗಿದ್ದರಿಂದ ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿ ವಿಳಂಬವಾಗಿರುತ್ತದೆ, ಅದಲ್ಲದೇ ಮಾತೃ ಇಲಾಖೆಗೆ ವರ್ಗವಾದನಂತರ ವೋಚರುಗಳನ್ನು ಸಲ್ಲಿಸಲು ತಡವಾಗಿರುತ್ತದೆ. ವೋಚರ್ ಸಲ್ಲಿಸಲು ಮತ್ತು ತಮ್ಮ ಮೇಲಿರುವ ಅಪಾದನೆಯನ್ನು ನ್ಯಾಯಯುತವಾಗಿ ಅಂತಿಮಗೊಳಿಸಿ, ವಿಚರಣಾಧಿಕಾರಿಗಳು ವಿಚಾರಣಾ ವರದಿಯನ್ವಯ ಯಾವುದೇ ತಪಾಸಣೆಯು ವ್ಯವಸ್ಥಿತವಾಗಿ ನಡೆದಿರುವುದಿಲ್ಲವೆಂದು ಆಗಿರುವ ಕೆಲಸ ಕಾರ್ಯಕ್ರಮಗಳ ಬಗ್ಗೆ ನಮೂದಿಸದೇ ಏಕ ಪಕ್ಷೀಯವಾಗಿ ಹಣ ದುರುಪಯೋಗವಾಗಿರುವ ಬಗ್ಗೆ ತಿಳಿಸಿರುವುದರಲ್ಲಿ ಸತ್ಯಾಂಶವಿಲ್ಲವೆಂದು ತಿಳಿಸಿ, ತಮ್ಮ ಮೇಲಿರುವ ಆರೋಪಗಳಿಂದ ಮುಕ್ತರನ್ನಾಗಿ ಮಾಡಬೇಕೆಂದು ಕೋರಿರುವರು.

ಶ್ರೀ ಡಿ.ಎನ್. ಹುಚ್ಚೇಗೌಡ, ಕೃಷಿ ಅಧಿಕಾರಿ( ನಿವೃತ್ತ) ಇವರು ಸರ್ಕಾರದ 2ನೇ ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ತಾವು ಸದರಿ ಹಣವನ್ನು ಉದ್ದೇಶಿತ ಕಾರ್ಯಕ್ರಮಗಳಿಗಾಗಿಯೇ ಬಳಸಿಕೊಂಡಿರುವುದಕ್ಕೆ ಯಾವುದೇ ಸಮಂಜಸ ಹೇಳಿಕೆಯನ್ನು ಮತ್ತು ಸದರಿ ಹೇಳಿಕೆಗೆ ಪೂರಕ ದಾಖಲೆಗಳನ್ನು ನೀಡಿರುವುದಿಲ್ಲ. ಆದ್ದರಿಂದ ಅವರ ಮೇಲಿನ ರುಜುವಾತಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯಲ್ಲಿನ ಅಂಶವನ್ನು ಒಪ್ಪಿ, ಸದರಿಯವರು ದುರುಪಯೋಗಪಡಿಸಿಕೊಂಡಿರುವ ಹಣವನ್ನು ಅವರ ನಿವೃತ್ತಿ ಉಪದಾನ ಮತ್ತಿತರೆ ಸೌಲಭ್ಯಗಳಿಂದ ವಸೂಲು ಮಾಡುವ ದಂಡನೆಯನ್ನು ವಿಧಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ. ಕೃಇ 38 ಕೃಪವಿ 2005,**
**ಬೆಂಗಳೂರು, ದಿನಾಂಕ:18/07/2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಪ್ರಕರಣದಲ್ಲಿ ಆರೋಪಿತ ಅಧಿಕಾರಿಯವರಾದ ಶ್ರೀ. ಡಿ. ಎನ್. ಹುಚ್ಚೇಗೌಡ, ಅಂದಿನ ಕೃಷಿ ಅಧಿಕಾರಿ, (ಹಾಲಿ . ನಿವೃತ್ತ) ಜಲಾನಯನ ಅಭಿವೃದ್ಧಿ ಇಲಾಖೆ, ಪಿರಿಯಾ ಪಟ್ಟಣ ಇವರು ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಹಣ ರೂ. 6,57,300/- (ಒಟ್ಟು ಆರು ಲಕ್ಷದಾ ಐವತ್ತೇಳು ಸಾವಿರದ ಮೂರು ನೂರು ರೂಪಾಯಿ ಮಾತ್ರ) ಇವರ ನಿವೃತ್ತಿ ಉಪದಾನ ಮತ್ತು ಇತರೇ ಸೌಲಭ್ಯಗಳಿಂದ ವಸೂಲು ಮಾಡುವ ದಂಡನೆಯನ್ನು ವಿಧಿಸಲಾಗಿದೆ.

ಇನ್ನುಳಿದ (1) ಶ್ರೀ ಹೆಚ್.ಎನ್.ಚಂದ್ರಶೇಖರಯ್ಯ, ಅಂದಿನ ಕೃಷಿ ಸಹಾಯಕ, ಜಲಾನಯನ ಅಭಿವೃದ್ಧಿ ಇಲಾಖೆ ಪಿರಿಯಾ ಪಟ್ಟಣ, ಹಾಗೂ (2) ಶ್ರೀ.ಎಂ.ಎನ್. ಮಲ್ಲೇಗೌಡ, ಅಂದಿನ ಕೃಷಿ ಸಹಾಯಕ, ಜಲಾನಯನ ಅಭಿವೃದ್ಧಿ ಇಲಾಖೆ ಪಿರಿಯಾ ಪಟ್ಟಣ, ಇವರ ಮೇಲಿರುವ ಆರೋಪಗಳನ್ನು ವಿಚಾರಣೆಯಲ್ಲಿ ಸಾಬೀತಾಗದ ಕಾರಣ ಅವರನ್ನು ಅವರ ಮೇಲಿನ ಆರೋಪಗಳಿಂದ ದೋಷ ಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.

3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
4) ಶ್ರೀ.ಎಸ್.ಸುಬ್ಬರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ನಂ. 1033, 9ನೇ ಬಿ ಮೇನ್, 8ನೇ ಕ್ರಾಸ್.ನ್ಯಾಯಾಂಗ ಬಡಾವಣೆ, ಜಿ.ಕೆ.ವಿ.ಕೆ ಅಂಚೆ, ಬೆಂಗಳೂರು-560 065.
5) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6) ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಮೂಲಕ).
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
8) ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಸಹಾಯಕರು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.